ಕಥೆ

# ರಕ್ತದ ಹೂವುಗಳು

 

ಇಂಗ್ಲಿಷ್ ಮೂಲ: **ಕೆ.ಲಾಂಗ್ಲೋಹ್ ಪಾರ್ಕರ್**

**ಕನ್ನಡಕ್ಕೆ: ಸಿಡ್ನಿ ಶ್ರೀನಿವಾಸ್**

ಕಲೆ: ರೂಪಶ್ರೀ ಕಲ್ಲಿಗನೂರು

ನದಿಯ ಹತ್ತಿರವಿದ್ದ ಆ ಪಂಗಡದ ಮಂದಿ ಅಂದು ಬೆಳಿಗ್ಗೆ ಗಹನ ಚರ್ಚೆಯಲ್ಲಿ ತೊಡಗಿದ್ದರು. ಹಿಂದಿನ ರಾತ್ರಿ ವಿಂಬಾಕೊಬೊಲೊ ಓಡಿಹೋಗಿದ್ದ. ಅಲ್ಲದೆ ಟಿಲ್ಬಾರ್ಟ ನ ವಧುವಾಗಬೇಕಾಗಿದ್ದ ಪರ್ಲೀಮಿಲಳನ್ನೂ ಜೊತೆಗೆ ಕೊಂಡೊಯ್ದಿದ್ದ. ವೃದ್ದರೆಲ್ಲಾ ಕುಳಿತು, ಅವರಿಬ್ಬರನ್ನು ಹೇಗೆ ಹಿಂದಕ್ಕೆ ಕರೆತರುವುದು ಎಂದು ಆಲೋಚಿಸುತಿದ್ದರು. ಅವರ ಮಾತುಕತೆ ಮುಂದುವರೆಯುತ್ತಿದ್ದಂತೆ ಕೆಲವು ಯುವಕರು ಬಂದು, 'ಓಡಿ ಹೋದವರ ಹೆಜ್ಜೆಗುರುತು ಹಿಡಿದೆವು. ಅವರು ಬೌಲ್ಕಾ ( ಸರೋವರ )ದತ್ತ ಹೋಗಿದ್ದಾರೆ.' ಎಂದು ವರದಿಮಾಡಿದರು. ಅಲ್ಲಿ ಹತ್ತಿರದ ದೇಶದ ಬೇರೆಯ ಪಂಗಡವೊಂದು ಬೇಟೆಗಾಗಿ ಬೀಡುಬಿಟ್ಟಿತ್ತು. ಈ ವಿಂಬಾಕೊಬೊಲೊನ ತಂದೆ ಅದೇ ಗುಂಪಿಗೆ ಸೇರಿದವನಾಗಿದ್ದ.

ಹಿರಿಯರಿಗೆ ಮನನವಾಯಿತು– ಪಲಾಯನ ಮಾಡಿದವರು ಆ ಗುಂಪಿನಲ್ಲಿ ಆಶ್ರಯ ಕೋರುತ್ತಾರೆ. ಅವರು ತಮ್ಮ ಯೋಧರನ್ನು ಕರೆದು ಹೇಳಿದರು, 'ನಿಮ್ಮ ಆಯುಧಗಳನ್ನು ಕೈಗೆ ತೆಗೆದುಕೊಳ್ಳಿ. ನಾವು ಆ ಗುಂಪಿನ ಬಳಿ ಹೋಗಿ ನಮ್ಮ ಜನರನ್ನು ಹಿಂತಿರುಗಿಸುವಂತೆ ಒತ್ತಾಯ ಪಡಿಸೋಣ. ನಂತರ ವಿಂಬಾಕೊಬೊಲೊನನ್ನು ಕಡಿದುಹಾಕೋಣ. ಪರ್ಲೀಮಿಲಳ ಗತಿ ಟಿಲ್ಬಾರ್ಟಗೆ ಬಿಟ್ಟದ್ದು. ಅವನು ಅವಳನ್ನು ಬೆಕಾದರೆ ಕೊಲ್ಲಲಿ ಅಥವಾ ಇಟ್ಟುಕೊಳ್ಳಲಿ.'

ಕೂಡಲೆ ತಮ್ಮ ಮೈಗಳ ಮೇಲೆ ಯುದ್ಧವನ್ನು ಸೂಚಿಸುವ ಬಣ್ಣಗಳನ್ನು ಬಳಿದುಕೊಂಡು, ತಂತಮ್ಮ ಆಯುಧಗಳನ್ನು ಕೈಗೆತ್ತಿಕೊಂಡು ಎಲ್ಲರೂ ಮುಂದುವರೆದರು. ಸತತವಾಗಿ ಎರಡು ದಿನ ಹೆಜ್ಜೆಗುರುತನ್ನು ಹಿಡಿದು ನಡೆದರು. ಮೂರನೆಯ ದಿನ ಅವರಿಗೆ ಶತ್ರು ಬೀಡಿನಲ್ಲಿ ಹೊಗೆಯಾಡುತ್ತಿದ್ದುದು ಕಂಡುಬಂತು. ಶತ್ರುಗಳಿಗೆ ತಮ್ಮ ಬೇಹುಗಾರರ ಮೂಲಕ ವಿಂಬಾಕೊಬೊಲೊ ಮತ್ತು ಪರ್ಲೀಮಿಲ ಇಬ್ಬರನ್ನೂ ಹಿಂತಿರುಗಿಸಬೇಕೆಂದು ಸಂದೇಶ ಕಳಿಸಿದರು.

ಆದರೆ ಶತ್ರು ಬೀಡಿನಲ್ಲಿ ಆದದ್ದೇ ಬೇರೆ. 'ಏನೇ ಆದರೂ ನನ್ನನ್ನು ಮುದಿ ಟಿಲ್ಬಾರ್ಟನ ಬಳಿಗೆ ಕಳಿಸಬೇಡಿ. ಅವನು ಈಗಾಗಲೇ ತನ್ನ ವಾಡಿ (waddy )ಯಿಂದ ಹೊಡೆದು ಇಬ್ಬರು ಹೆಂಡಿರನ್ನು ಸಾಯಿಸಿದ್ದಾನೆ. ನಾನು ಮೂರನೆಯವಳಾಗುವುದು ಬೇಡ.' ಎಂದು ಪರ್ಲೀಮಿಲ ಬಿಕ್ಕಿ ಬಿಕ್ಕಿ ಅತ್ತು ಗುಂಪಿನ ನಾಯಕರನ್ನು ಕೇಳಿಕೊಂಡಳು.

ವಿಂಬಾಕೊಬೊಲೊ ಉತ್ತರಿಸಿದ, 'ಅಳಬೇಡ, ಹೆಣ್ಣೇ. ನಾನು ನಿನ್ನನ್ನು ಇನ್ನಾವ ಪುರುಷನಿಗೂ ಕೊಡುವುದಿಲ್ಲ. ಅಂತಹ ಸಂದರ್ಭ ಬಂದರೆ ನಿನ್ನನ್ನು ನನ್ನ ಈಟಿಯಿಂದ ಹೊಡೆದು ಸಾಯಿಸುತ್ತೇನೆ.' ನಂತರ ಅವನು ಹಿರಿಯರನ್ನು ಉದ್ದೇಶಿಸಿ ನುಡಿದ, 'ಟಿಲ್ಬಾರ್ಟ ತನ್ನ ಗಂಡಸುತನವನ್ನು ತೋರಿಸಿ ನನ್ನ ಜೊತೆ ಹೋರಾಡಲಿ.